


ಗುರಿ ಮುಟ್ಟಿತು ಪ್ರಯಾಸಕರ ನಡಿಗೆ ಪ್ರೇಮಯಾತ್ರೆಯಾಯಿತು ತೀರ್ಥಯಾತ್ರೆ

ಜೊಹಾನಾ ಪಾಲ್‌ನನ್ನು ಕೆಣಕುವಂತೆ ಕೇಳಿದಳು: ‘ಈ ಪ್ರಶ್ನೆಗಳಿಗೆ ನಿಮಗಿಂತ ಯಾರು ಒಳ್ಳೆಯ ಉತ್ತರ ಕೊಡ್ತಾರೆ?’

‘ಹೀಗೆ ನನ್ನನ್ನು ಪ್ರಶ್ನೆಗಳಿಂದ ಚುಚ್ಚಬೇಡ’ – ನಾನು ರೇಗಿದೆ.

‘ಓಹ್, ನೀವು ಸಿಟ್ಟಾಗುತ್ತಿದ್ದೀರಿ, ಸಾರಿ’ ಎಂದು ಜೊಹಾನಾ ಆಶ್ಚರ್ಯದಿಂದ ಹೇಳಿದಳು. ಜೊಹಾನಾ ‘ಸಾರಿ’ ಎಂದು ತನ್ನ ತಾಯಿಗಾಗಿ ಹೇಳುತ್ತಿದ್ದಾಳೆ ಎಂಬುದು ನನಗೆ ತಿಳಿದಿತ್ತು. ಏಕೆಂದರೆ ತನ್ನ ಮಮ್ಮಿಗೆ ನಾನೀಗ ಎಷ್ಟು ಅವಶ್ಯಕ ಎಂಬುದು ಸಹ ಅವಳಿಗೆ ಗೊತ್ತಿತ್ತು. ಇಲ್ಲದಿದ್ದಲ್ಲಿ ಜೊಹಾನಾ ಮತ್ತು ಕರೀನಾ ಯಾರಿಗೂ ‘ಸಾರಿ’ ಎಂದು ಹೇಳುವವರಲ್ಲ.

‘ಸೃಷ್ಟಿ ಒಂದು ಜಾಗದಲ್ಲಿ ಸ್ಥಿರವಾಗಿರದು, ಅದು ಬದಲಾಗುತ್ತಿರುತ್ತದೆ ಎಂದು ಅಭಿವೃದ್ಧಿಯ ಸಿದ್ಧಾಂತಗಳು ಹೇಳುತ್ತವೆ. ನೀವು ಎವೊಲ್ಯೂಷನ್ ಓದಿರಬೇಕು?’

‘ಇಲ್ಲ ಇಲ್ಲ, ನಾನು ಅವಿದ್ಯಾವಂತ...’ ನಾನು ಇದ್ದಕ್ಕಿದ್ದಂತೆ ಎದ್ದು ನಿಂತೆ. ಅವಳ ಬೊಗಳೆಯನ್ನು ಸಹಿಸುವುದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ.

‘ಸರಿ, ಬರ್ತೀನಿ... ನೀನು ಮೇಲಿನ ರೂಮಿಗೆ ಹೋಗುತ್ತಿದ್ದೀಯ? ನಿನ್ನ ಮಮ್ಮಿಗೆ ನಾನು ನಾಳೆ ಸಂಜೆ ನಾಲ್ಕು ಗಂಟೆಗೆ ಬರುವುದಾಗಿ ಹೇಳು’ ಎಂದು ಹೇಳಿ ನಾನು ಅವಳಿಂದ ಬೀಳ್ಕೊಂಡೆ. ನಂತರ ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ಅಲ್ಲಿಂದ ಹೊರಟು ಹೋದೆ.

***

ತನ್ನ ತಾಯಿಯ ಮರಣದ ನಂತರ ಜೊಹಾನಾ ಎಲ್ಲರಿಂದ ಕಣ್ಮರೆಯಾದಳು. ನಂತರ ಕರೀನಾಳಿಂದ, ಅವಳು ಕ್ರಾಸ್ ಕಲ್ಚರಲ್ ಕೋರ್ಸ್‌ಗೆ ದಕ್ಷಿಣ ಕೊರಿಯಾಕ್ಕೆ ಹೋಗಿದ್ದಾಳೆ ಎಂಬ ವಿಷಯ ತಿಳಿಯಿತು. ಅವಳಿಗೆ ತನ್ನ ತಾಯಿಯ ಸಾವು ತುಂಬಾ ಆಘಾತವನ್ನುಂಟು ಮಾಡಿತ್ತು. ಅವಳು ದೂರದ ದೇಶಕ್ಕೆ ಹೋಗಿ ಸ್ಥಳ ಬದಲಾವಣೆ ಮಾಡಿಕೊಳ್ಳಲು ಬಯಸುತ್ತಿದ್ದಳು.

ಈಗ ನನಗೆ ನೀನಾಳ ಪುತ್ರಿಯರು ಸಮಸ್ಯೆಯಾಗಿಲ್ಲ. ಅವರು ನನ್ನ ಸಂಪರ್ಕದಲ್ಲಿರುವುದಾದರೆ ಒಳಿತೇ; ಇಲ್ಲದಿದ್ದಲ್ಲಿ ಅವರು ಎಲ್ಲೇ ಇರಲಿ ಸುಖವಾಗಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ.

ನೀನಾಳ ಮನೆಯನ್ನು ಖಾಲಿ ಮಾಡಲು ನಾನೇ ಸಹಾಯ ಮಾಡುವುದಾಗಿ ಶೀಲಾದೇವಿಯವರಿಗೆ ಹೇಳಿದೆ. ಮನೆಯನ್ನು ಮಾರಲಾಗಿತ್ತು. ಅದರ ಬೆಲೆಯನ್ನು ಕರೀನಾ ಮತ್ತು ಜೊಹಾನಾಳಿಗೆ ಅರ್ಧರ್ಧ ಹಂಚುವುದಾಗಿ ತೀರ್ಮಾನಿಸಲಾಗಿತ್ತು. ಶ್ರೀನಿವಾಸನ್ ದಂಪತಿಗಳ ಸಮಸ್ತ ಆಸ್ತಿಗೆ ಕರೀನಾ ಮತ್ತು ಜೊಹಾನಾ ಹಕ್ಕುದಾರರಾಗಿದ್ದರು. ಅವರ ಮಾನ್ಸೂನ್ ಡ್ರೆಸಸ್ ಮತ್ತು ಜ್ಯುವೆಲರಿಯ ಆಭರಣಗಳು ಮಾರಾಟವಾಗಿದ್ದವಾದರೂ ಅಂಗಡಿಯ ಕಟ್ಟಡ ಅವರದೇ ಆಗಿತ್ತು, ಹೀಗಾಗಿ ಅದರ ಬಾಡಿಗೆ ಈಗಲೂ ಅವರಿಗೇ ಬರುತ್ತಿತ್ತು.